ಕರ್ನಾಟಕ ಸರ್ಕಾರ

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

Government of Karnataka

# Karnataka Residential Educational Institutions Society

(An Organisation of Govt. of Karnataka)

ಕವಶಿಸಸ/ಆಡಳಿತ/ಸಿಬ್ಬಂದಿ/ನೇ.ನೇ-ಚಿ.ಶಿ/ಸಿ.ಆರ್-05/2022-23 ದಿನಾಂಕ: 09-09-2022

**ತಿಳುವಳಿಕೆ ಪತ್ರ**

**ವಿಷಯ :** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಆಯ್ಕೆಯಾದ ಚಿತ್ರಕಲಾ ಶಿಕ್ಷಕರು (ಪದವೀಧರ) ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಇತರೆ ದಾಖಲೆಗಳ ಪರಿಶೀಲನೆ ಮಾಡುವ ಬಗ್ಗೆ.

**ಉಲ್ಲೇಖ :** 1. ಆಯೋಗದ ಅಧಿಸೂಚನೆ ಸಂಖ್ಯೆ: ಪಿ.ಎಸ್.ಸಿ (1) ಆರ್.ಟಿ(4)ಟಿ-3/2016 ದಿ: 03-11-2016
2. ಅಂತಿಮ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ/856/ಆರ್‌ಟಿಬಿ(2)2019-20 ದಿನಾಂಕ:02-07-2022
3. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ ಪಿಎಸ್‌ಸಿ143/ಆರ್‌ಟಿಬಿ(2)/2022-23 /1207 ದಿನಾಂಕ:14-07-2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ವೃಂದದ ಚಿತ್ರಕಲಾ ಶಿಕ್ಷಕ(ಪದವೀಧರ) ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಹಮ್ಮಿಕೊಂಡಿದ್ದು, ಉಲ್ಲೇಖ(2)ರ ಆಯೋಗದ ಅಧಿಸೂಚನೆಯಲ್ಲಿ ಅರ್ಹ ಚಿತ್ರಕಲಾ ಶಿಕ್ಷಕ (ಪದವೀಧರ) ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಉಲ್ಲೇಖ(3)ರ ಕರ್ನಾಟಕ ಲೋಕಸೇವಾ ಆಯೋಗದ ಪತ್ರದಲ್ಲಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವ ಮುನ್ನ ನೇಮಕಾತಿ ಪ್ರಾಧಿಕಾರವು ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರ ನೇಮಕಾತಿ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತಾರೆ. ಆದ್ದರಿಂದ ಆಯ್ಕೆಯಾಗಿರುವ ಚಿತ್ರಕಲಾ ಶಿಕ್ಷಕ (ಪದವೀಧರ) ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಸಂಬಂಧಪಟ್ಟ ಇತರೆ ದಾಖಲೆಗಳ ಪರಿಶೀಲನೆ ಕಾರ್ಯವನ್ನು ದಿನಾಂಕ: 17-09-2022 ರಂದು **ಡಾ|| ಬಿ.ಆರ್ ಅಂಬೇಡ್ಕರ್ ಭವನದ ತಳ ಮಹಡಿ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು-52** ಇಲ್ಲಿ ಆಯೋಜಿಸಲಾಗಿದೆ. ಅಭ್ಯರ್ಥಿಗಳು ತಮ್ಮ **ವಿದ್ಯಾರ್ಹತೆಯ ಎಲ್ಲಾ ಮೂಲ ಅಂಕಪಟ್ಟಿಗಳು ಹಾಗೂ ಇತರೆ ಸಂಬಂಧಪಟ್ಟ ದಾಖಲೆ (ಕನ್ನಡ ಮಾಧ್ಯಮ, ಗ್ರಾಮೀಣ, ಹೈ.ಕ. ಯೋಜನಾ ನಿರಾಶ್ರಿತ, ಜಾತಿ & ಆದಾಯ ಪ್ರಮಾಣ ಪತ್ರ, ವಿಕಲಚೇತನ ಪ್ರಮಾಣ ಪತ್ರ, ಮಾಜಿ ಸೈನಿಕ ಪ್ರಮಾಣ ಪತ್ರ) ಗಳನ್ನು ಕಡ್ಡಾಯವಾಗಿ ಮೂಲ ಹಾಗೂ ದೃಢೀಕೃತ ಎರಡು ನಕಲು ಪ್ರತಿಗಳೊಂದಿಗೆ ತಪ್ಪದೇ ಹಾಜರಾಗಬೇಕೆಂದು ಸೂಚಿಸಲಾಗಿದೆ.** ನಿಗದಿತ ಅವಧಿಯಲ್ಲಿ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು, ಯಾವುದೇ ಕಾರಣಕ್ಕೂ ದಾಖಲೆಗಳ ಸಲ್ಲಿಕೆಗೆ ಸಮಯಾವಕಾಶ ನೀಡುವುದಿಲ್ಲ.

ಮುಂದುವರೆದು ಒಂದು ವೇಳೆ ದಾಖಲಾತಿ ಪರಿಶೀಲನೆಗೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಗೈರುಹಾಜರೆಂದು ಪರಿಗಣಿಸಲಾಗುವುದು. ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ನಿಗದಿತ ಸಮಯದ ನಂತರ ಬಂದಲ್ಲಿ ಅವಕಾಶವಿರುವುದಿಲ್ಲ. ಅಲ್ಲದೇ ಅಭ್ಯರ್ಥಿಗಳ ಪೋಷಕರು/ಸಂಬಂಧಿಗಳಿಗೆ ಪ್ರವೇಶವಿರುವುದಿಲ್ಲ.

| ಕ್ರ ಸಂ | ದಿನಾಂಕ | | ಕೆ.ಪಿ.ಎಸ್.ಸಿ ರ್‍ಯಾಂಕ್ ನಂ |
|---|---|---|---|
| 1 | 17-09-2022 | ಬೆಳಗ್ಗೆ 10.30 ರಿಂದ ಮಧ್ಯಾಹ್ನ 2.00 ರವರೆಗೆ | **ಉಳಿಕೆ ಮೂಲ ವೃಂದ** ರ್‍ಯಾಂಕ್ 1 ರಿಂದ 120 |
| | | ಮಧ್ಯಾಹ್ನ 2.30 ರಿಂದ ಸಾಯಂಕಾಲ 5.30 ರವರೆಗೆ | ರ್‍ಯಾಂಕ್ 121 ರಿಂದ 182<br>**ಹೈ.ಕ ವೃಂದ** ರ್‍ಯಾಂಕ್ 1 ರಿಂದ 46 |

ಕಾರ್ಯನಿರ್ವಾಹಕ ನಿರ್ದೇಶಕರು